ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 10.11.2022.

**ಮುಖ್ಯ ವಿಚಾರಣೆ - ವಾದಿ ಪರಃ ಶ್ರೀ ವಿ. ಎಸ್. ಕೆ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

ಆದ್ದರಿಂದ ವಾದಿಯು ದಾವೆಯಲ್ಲಿ ಕೋರಿದಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಸಿ. ಎನ್. ಪಿ. ವಕೀಲರಿಂದ.**

1) ನಾನು ಶಾಲೆ ಕಲಿತಿರುವುದಿಲ್ಲ. ನಾನು ಮೂಲತಃ ಹೊನ್ನಾಳಿ ತಾಲೂಕು ಬಳ್ಳೇಶ್ವರ ಗ್ರಾಮದ ನಿವಾಸಿ ಎಂದರೆ ಸರಿ. ಬಳ್ಳೇಶ್ವರ ಗ್ರಾಮವು ಕಳಗೊಂಡ ಗ್ರಾಮದಿಂದ ಸುಮಾರು 65 ಕಿ. ಮೀ ದೂರದಲ್ಲಿ ಇರುತ್ತದೆ ಎಂದರೆ ಸರಿ. ವಾದಿಯರು ಯಾರು ಕಳಗೊಂಡ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು 1ನೇ ವಾದಿಯು ಕಳಗೊಂಡ ಗ್ರಾಮದಲ್ಲಿ ವಾಸವಾಗಿದ್ದು, 2 ರಿಂದ 7 ನೇ ಪ್ರತಿವಾದಿಯರು ಕಳಗೊಂಡ ಗ್ರಾಮದ ತವರುಮನೆಗೆ ಹೋಗಿ ಬಂದು ಮಾಡುತ್ತಾ ಇದ್ದು, ದಾವಾ ಆಸ್ತಿಯ ವಹಿವಾಟು ಉಪಭೋಗ ಮಾಡುತಾ ಸಾಗು ಮಾಡುತ್ತಾ ಇದ್ದಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ.

2) ನಾನು ಮೊದಲು 10-15 ವರ್ಷಗಳಿಂದ ಕಳಗೊಂಡ ಗ್ರಾಮದಲ್ಲಿ ವಾಸವಾಗಿದ್ದು, ಮದುವೆಯಾದ ನಂತರ ಬಳ್ಳೇಶ್ವರ ಗ್ರಾಮದಲ್ಲಿ ವಾಸವಾಗಿದ್ದು, ಕಳಗೊಂಡ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತೇನೆ. ನಾನು ಯಾವ ಇಸ್ವಿಯಿಂದ ಯಾವ ಇಸ್ವಿಯವರೆಗೆ ಕಳಗೊಂಡ ಗ್ರಾಮದಲ್ಲಿ ವಾಸವಾಗಿದ್ದೆನು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅವಿದ್ಯಾವಂತನಾಗಿದ್ದು, ಇಸ್ವಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ 28/2 ಇರುತ್ತದೆ. ಚೆಕ್ಕು ಬಂದಿ ಹೇಳಲು ಬರುವುದಿಲ್ಲ.

3) ನಾನು ಈ ಹಿಂದೆಯೇ ವಾದಿಯರ ಜಮೀನನ್ನು ಟ್ರ್ಯಾಕ್ಟರ ಮೂಲಕ ಉಳುಮೆ ಮಾಡುತ್ತಿದ್ದೆನು. ಈಗ್ಗೆ ಸುಮಾರು 6 ತಿಂಗಳ ಹಿಂದೆ ಉಳುಮೆ ಮಾಡಿರುತ್ತೇನೆ. ನಾನು ಬಾಡಿಗೆ ಟ್ರ್ಯಾಕ್ಟರ ಮೂಲಕ ವಾದಿಯರ ಜಮೀನನ್ನು ಉಳುಮೆ ಮಾಡಿರುತ್ತೇನೆ. ನಾನು ಡ್ರೈವರ ಮೂಲಕ ಟ್ರ್ಯಾಕ್ಟರನಲ್ಲಿ ಉಳುಮೆ ಮಾಡಿರುತ್ತೇನೆ. ನಾನು ವಾದಿಯರ ಜಮೀನನ್ನು ಟ್ರ್ಯಾಕ್ಟರ ಮೂಲಕ ಉಳುಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳಿಸಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

4) ವಾದಿಯರ ಅಣ್ಣನಾದ ಒಬ್ಬ ವರ್ಧಮಾನಪ್ಪ ಇವನು ದಾವಾ ಆಸ್ತಿಯ ರಿ. ಸ. ನಂ. 128/2 ಎ ವಿಸ್ತೀರ್ಣ 4 ಎಕರೆ 8 ಗುಂಟೆ ನೇದ್ದರ ಪೈಕಿ ಪೂರ್ವಭಾಗದ ಒಂದು ಎಕರೆ ಜಮೀನನ್ನು ಪ್ರತಿವಾದಿಯ ತಂದೆಯಾದ ಹನುಮಂತಪ್ಪ ತಿರುಕಪ್ಪ ಕರಿಯಮ್ಮನ ಪೂಜಾರ ಇವರಿಗೆ ದಿಃ 24.12.1999 ರಂದು ರೂಪಾಯಿ 71,000/- ಗಳಿಗೆ ಒಪ್ಪಿಕೊಂಡು ಆ ಪೈಕಿ ರೂಪಾಯಿ 70,000/- ಗಳನ್ನು

ಸಂಚಗಾರವಾಗಿ ಪಡೆದುಕೊಂಡು ಖರೀದಿ ಪತ್ರ ವನ್ನು ಬರೆದುಕೊಟ್ಟಿದ್ದು, ಆ ದಿನವೇ ವಾದಿಯರ ತಂದೆಗೆ ದಾವಾ ಆಸ್ತಿಯ ಕಬ್ಜಾವನ್ನು ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಿತ ನಾನು ಇಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

5) ನಾನು ವಾದಿಯರ ಸಂಬಂಧಿಕನಿದ್ದು, ಅವರು ನನ್ನಲ್ಲಿ ವಿನಂತಿಸಿಕೊಂಡಿದ್ದರಿಂದ ನಾನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. 6 ನೇ ವಾದಿಯ ಮಾತನ್ನು ಕಟ್ಟಿಕೊಂಡು ಇಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಸಂಚಗಾರ ಪತ್ರದಡಿಯಲ್ಲಿ ಪ್ರತಿವಾದಿಯ ತಂದೆಗೆ ಬರೆದುಕೊಟ್ಟ ಒಂದು ಎಕರೆ ಜಮೀನನ್ನು ಆತನು ತನ್ನ ಜೀವಿತ ಅವಧಿಯ ಕಾಲದಲ್ಲಿ ಸಂಪೂರ್ಣವಾಗಿ ಕಬ್ಜಾ ವಹಿವಾಟನ್ನು ಹೊಂದಿ ಸಾಗು ಮಾಡುತ್ತಾ ಇದ್ದು, ಆತನು ಪೋತಿಯಾದ ನಂತರ ಆತನ ಒಬ್ಬನೇ ಮಗನಾದ ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾ ವಹಿವಾಟನ್ನು ಹೊಂದಿ ಇಂದಿನವರೆಗೂ ಸಾಗು ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ವಾದಿಯರಿಗೆ ಅನೂಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.